ಆದೇಶ ಮಾಡಿದರು. ಆದರೆ ಇವತ್ತಿನವರೆಗೂ ಕರೆಂಟ್ ಇಲ್ಲದೆ ಪಂಪ್‌ಸೆಟ್ ನಡೆಯುವ ಹಾಗೆ ಇಲ್ಲ ಜೊತೆಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ. ಉತ್ತರದಲ್ಲಿ ಉಪ ವಿದ್ಯುತ್ ಕೇಂದ್ರವನ್ನು ಸುಧಾರಣೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅಲ್ಲಿಯವರೆಗೆ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲ ಆ ಸಮಸ್ಯೆಯನ್ನು ಪರಿಹಾರ ಮಾಡುವುದು ಮಾನ್ಯ ಮುಖ್ಯಮಂತ್ರಿಗಳಿಗೆ ಬಿಟ್ಟಿದ್ದು. ಮೊನ್ನೆ 27ನೇ ತಾರೀಖು ನೂರಾರು ಜನ ಕುಡಿಯುವುದಕ್ಕೆ ನೀರು ಇಲ್ಲ. ಅದಕ್ಕೆ ವ್ಯವಸ್ಥೆ ಮಾಡಿ ಎಂದು ಫೋರಾವ್ ಮಾಡಿದರು. ಆಮೇಲೆ ರೈತರು ಶೇಂಗಾ ಬೆಳೆಗಳನ್ನು ಹಾಕಿದ್ದಾರೆ. ಅವುಗಳೆಲ್ಲಾ ನೀರಿಲ್ಲದೆ ಒಣಗಿ ಹೋಗಿವೆ. ವಿದ್ಯುತ್ ನಿಲುಗಡೆಯಾಗುತ್ತಿರುವುದರಿಂದ ರೈತರಿಗೆ ತೊಂದರೆಯಾಗಿರತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಸೂಕ್ತ ಗಮನ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ತೊಂದರೆಯಾಗಿರತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನೂ ಕೂಡ ಒಪ್ಪುತ್ತೇನೆ. ಹರಪನಹಳ್ಳಿ ವಿದ್ಯುತ್ ಕೇಂದ್ರಕ್ಕೆ ಮುನಿರಾಬಾದಿನಿಂದ ವಿದ್ಯುತ್ ಸರಬರಾಜು ಆಗಬೇಕು. ಹರಪನಹಳ್ಳಿಯ ತೇಲಗಿ, ಪುನಬಘಟ್ಟಗಳಲ್ಲಿ 66 ಕೆ. ವಿ. ಉಪ ವಿದ್ಯುತ್ ಕೇಂದ್ರಗಳನ್ನು ನಿರ್ಮಿಸತಕ್ಕಂತಹ ಕೆಲಸ ಮಾಡಬೇಕೆಂದು ಯೋಚನೆ ಮಾಡಿ ಇದರ ಕಾಮಗಾರಿ ಕೆಲಸಗಳು ಈಗಾಗಲೇ ನಡೆಯುತ್ತಿವೆ. ಇದಾದ ಮೇಲೆ ಪರಿಸ್ಥಿತಿ ಸ್ವಲ್ಪ ಸುಧಾರಣೆಯಾಗಬಹುದು. ಈ ಕೆಲಸವನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಆದೇಶ ಕೊಟ್ಟಿದ್ದೇನೆ. ಅಲ್ಲದೆ ಹರಪನಹಳ್ಳಿಯಲ್ಲಿರುವ 66.11 ಕೆವಿ ಉಪ ವಿದ್ಯುತ್ ಕೇಂದ್ರಕ್ಕೆ ಓವರ್ ಲೋಡ್ ಆಗುತ್ತಿರುವುದಂದ ಇದಕ್ಕೆ ಕೆಪಾಸಿಟರ್ ಬ್ಯಾಂಕನ್ನು ಜೋಡಿಸಿ ಅದನ್ನು ಸರಿಪಡಿಸಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಇದರ ಬಗ್ಗೆ ಕೆಲಸವನ್ನು ಕೈಗೊಂಡು ಆದಷ್ಟು ಬೇಗನೆ ಸರಿಪಡಿಸುತ್ತೇವೆ.

ಶ್ರೀ ಬಿ,ಹೆಚ್. ಯಂಕಾನಾಯಕ್: ಆದಷ್ಟು ಬೇಗ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿ ಕೊಡಬೇಕು ಎಂದು ಇನ್ನೊಂದು ಸಲ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಜನರಿಗೆ ಬಹಳ ತೊಂದರೆ ಇದೆ. ದಿವಸಕ್ಕೆ ತಾಸು ಕರೆಂಟ್ ಇರುವುದಿಲ್ಲ. ಅಧಿಕಾರಿಗಳಿಗೆ ತಕ್ಷಣ ಆದೇಶ ಕೊಟ್ಟು ರೈತರ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

(ಉತ್ತರ ಇಲ್ಲ)

ಮೈಸೂರು ಹಾಗೂ ಬೆಂಗಳೂರಿನಲ್ಲಿ ವಿದ್ಯುತ್ ನಿಲುಗಡೆ ಮಾಡುತ್ತಿರುವುದು

233 - ಶ್ರೀ ಕೆ. ಹರ್ಷಕುಮಾರ್ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಹಾಗೂ ಬೆಂಗಳೂರು ನಗರದಲ್ಲಿ ಪ್ರತಿನಿತ್ಯ ಕೆ.ಇ.ಬಿ.ಯವರು ಸಂಜೆ 7.15 ರಿಂದ 7.30ರವರೆಗೆ ವಿದ್ಯುಚ್ಛಕ್ತಿ ನಿಲುಗಡೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದರಿಂದ ಸಾರ್ವಜನಿರಕರಿಗೆ ಪ್ರತಿನಿತ್ಯ ಆಗುತ್ತಿರುವ ಕಿರುಕಳವನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಇ) ವಿದ್ಯುಚ್ಛಕ್ತಿ ನಿಲುಗಡೆಯ ಸಮಯದಲ್ಲಿ ಆಗುವ ಕಳ್ಳತನ ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಮೈಸೂರು ನಗರದಲ್ಲಿ ಲೋಡ್ ಡಿಸ್ಪ್ಯಾಟ್ ಸೆಂಟರಿನ ಆದೇಶ ಬಂದಾಗ ಮಾತ್ರ ಸಂಜೆ 7.15ರಿಂದ ಅರ್ಧ ಘಂಟೆ ಕಾಲ ವಿದ್ಯುತ್ ನಿಲುಗಡೆಯನ್ನು ರೊಟೇಷನ್ ಪ್ರಕಾರ ಮಾಡುತ್ತಿರುತ್ತದೆ. ಬೆಂಗಳೂರು ನಗರದಲ್ಲಿ ಮಾಡುತ್ತಿಲ್ಲ.

ಆ) ಸಂಜೆಯ ಪೀಕ್ ಸಮಯದಲ್ಲಿ (ಸಂಜೆ 6ರಿಂದ 9 ಘಂಟೆವರೆಗೆ) ವಿದ್ಯುತ್ ಬೇಡಿಕೆ ಅಗಾಧವಾಗಿರುತ್ತದೆ. ಇದನ್ನು ಲಭ್ಯತೆಗೆ ಸರಿದೂಗಿಸಲು ಕನಿಷ್ಟ ಸಮಯದವರೆಗೆ ಮಾತ್ರ ಲೋಡ್ ಷೆಡ್ಡಿಂಗ್‌ನ್ನು ನಿರ್ವಹಿಸಬೇಕಾಗುತ್ತದೆ. ಇದು ಅನಿವಾರ್ಯ. ಇಲ್ಲದಿದ್ದಲ್ಲಿ ಇಡೀ ವ್ಯವಸ್ಥೆಯ ಕುಸಿತ ಉಂಟಾಗುವುದು. ಆದ್ದರಿಂದ ಸಾರ್ವಜನಿಕರು ಮಂಡಳಿಯೊಂದಿಗೆ ಸಹಕರಿಸಬೇಕಾಗಿದೆ.

ಇ) ಮೇಲ್ಕಂಡ ಅವಧಿಗಳಲ್ಲಿ ಲೋಡ್ ಷೆಡ್ಡಿಂಗ್ ಮಾಡುವ ಕಾರಣದಿಂದಾಗಿಯೇ ಕಳ್ಳತನವಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಹರ್ಷಕುಮಾರಗೌಡ: ಮಾನ್ಯ ಅಧ್ಯಕ್ಷರೆ, ಈ ಲೋಡ್‌ಶೆಡ್ಡಿಂಗ್ ಬಗ್ಗೆ ಮೈಸೂರುನಗರ ಮತ್ತು ಬೆಂಗಳೂರು ನಗರಕ್ಕೆ ಏತಕ್ಕೆ ತಾರತಮ್ಯ ಮಾಡಿದ್ದೀರಿ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಉತ್ತರ ಬೆಂಗಳೂರು ನಗರಕ್ಕೆ ಮಾತ್ರ ಏನಾಯಿತಿ ಇದೆ, ಮೈಸೂರು ನಗರಕ್ಕೆ ಲೋಡ್‌ಷೆಡ್ಡಿಂಗ್ ಕಡ್ಡಾಯ ಮಾಡಿದೆ ಎಂದು ಹೇಳಿದ್ದಾರೆ. ಇದಕ್ಕೆ ಕಾರಣವೇನು? ಈ ತಾರತಮ್ಯ ಏತಕ್ಕೆ ಆಗುತ್ತಿದೆ ಎನ್ನುವುದು ನನ್ನ ಪ್ರಶ್ನೆ. ಮತ್ತು ಕೊನೆ ಪ್ರಶ್ನೆಯಲ್ಲಿ ವಿದ್ಯುಚ್ಛಕ್ತಿ ನಿಲುಗಡೆಯ ಸಮಯದಲ್ಲಿ ಆಗುವ ಕಳ್ಳತನ ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು ಎಂದು ಕೇಳಿದ್ದೇನೆ. ಮೈಸೂರಿನ ಮಧ್ಯ ಭಾಗದಲ್ಲಿ ಅದರಲ್ಲೂ ಜನಸಂದಣಿ ಹೆಚ್ಚಾಗಿರುವ ಭಾಗದಲ್ಲಿ ಲೋಡ್‌ಶೆಡ್ಡಿಂಗ್ ವ್ಯವಸ್ಥೆಯಿಂದ ಏನಾಗಿದೆ ಎಂದರೆ, ಪಿಕ್‌ಪಾಕೆಟ್ ಆಗುತ್ತಿದೆ, ಕಳ್ಳತನವಾಗುತ್ತದೆ, ಹೆಣ್ಣುಮಕ್ಕಳಿಗೆ ಕಿರುಕುಳ ಕೊಡುವಂತಹ ಪ್ರವೃತ್ತಿ ಬೆಳೆದುಬಂದಿದೆ, ಅದನ್ನು ತಡೆಗಟ್ಟಬೇಕು. ಅದು ಕೂಡ ಸಂಜೆ 7 ಗಂಟೆಯಿಂದ 7-30 ಗಂಟೆ ಸಮಯದಲ್ಲಿ ಮೈಸೂರಿನ ಕೆ.ಆರ್. ಸರ್ಕಲ್ ಪರಿಸರದಲ್ಲಿ ಲೋಡ್‌ಶೆಡ್ಡಿಂಗ್ ಆಗುವುದರಿಂದ ಈ ರೀತಿ ವಿಪರ್ಯಾಸವಾಗಿದೆ. ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆ ಎನ್ನುವುದನ್ನು ನಾನು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಸತ್ಯಾಂಶವಿದೆ ಎನ್ನತಕ್ಕ ಮಾತನ್ನು ನಾನು ಒಪ್ಪುತ್ತೇನೆ. ಮೊಟ್ಟಮೊದಲನೆಯದಾಗಿ ನಮಗೆ ಪವರ್ ಶಾರ್ಟೇಜ್ ಇದೆ ಎನ್ನತಕ್ಕದ್ದು ಮೂಲ ಭೂತವಾದ ಪ್ರಶ್ನೆಯಿದೆ. ಎಲ್ಲಾ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಹೆಚ್ಚಿನ ವಿದ್ಯುಚ್ಛಕ್ತಿ ಉತ್ಪಾದನೆ ಮಾಡದಿದ್ದರೆ ನಮಗೆ ತೊಂದರೆ ಬರುತ್ತದೆ. ಆದರೂ ಪೀಕ್ ಆವರ್ಸ್ 6 ರಿಂದ 9 ಗಂಟೆಯವರೆಗೆ ಎಲ್ಲ ತರಹ ಗ್ರಾಹಕರಿಗೆ ಲೋಡ್‌ಶೆಡ್ಡಿಂಗ್ ಆಗುತ್ತದೆ. ಅದನ್ನು ಮಾಡುವುದು ಕೆಲವೊಮ್ಮೆ ಅನಿವಾರ್ಯವಾಗುತ್ತದೆ. ಆ ರೀತಿ ಮಾಡಿದಾಗ ಪಂಪ್‌ಸೆಟ್‌ನವರಿಗೆ ತೊಂದರೆಯಾಗುತ್ತದೆ, ರೈತರಿಗೆ ತೊಂದರೆಯಾಗುತ್ತದೆ, ಮನೆಯವರಿಗೆ ತೊಂದರೆಯಾಗುತ್ತದೆ, ಫ್ಯಾಕ್ಟರಿಗಳವರಿಗೆ ತೊಂದರೆಯಾಗುತ್ತದೆ. ಆದೇ ಸಂದರ್ಭದಲ್ಲಿ ಕಳ್ಳತನ ಮಾಡುವ ವಿಚಾರವುಂಟು, ಇಲ್ಲವೆಂದು ಹೇಳುವುದಿಲ್ಲ. ಅವರು ಇದೇ ಸಮಯವನ್ನು ಕಾಯುತ್ತಿರುತ್ತಾರೆ. ಆದಷ್ಟು ನಾವೇನು ಮಾಡುತ್ತಿದ್ದೇವೆಂದರೆ, ಹೆಚ್ಚು ವಿದ್ಯುಚ್ಛಕ್ತಿ ಉತ್ಪಾದನೆಯ ಕಡೆಗೆ ಸರ್ಕಾರ ಗಮನ ಕೊಡುತ್ತಿದೆ. ಇದು ಜನರಲ್ ಆಗಿ ಹೇಳತಕ್ಕ ಮಾತು, ನೇರವಾಗಿ ಈ ಪ್ರಶ್ನೆ ಇಲ್ಲಿ ಇಲ್ಲ. ಲೋಡ್‌ಶೆಡ್ಡಿಂಗ್ ಕಾಲ ಬಿಟ್ಟು ಉಳಿದ ಸಮಯದಲ್ಲಿ ಸರಿಯಾಗಿ ವಿದ್ಯುತ್ ಸರಬರಾಜು ಮಾಡತಕ್ಕ

ವ್ಯವಸ್ಥೆಗೆ ಮೊನ್ನೆತಾನೇ ಎಲ್ಲ ಅಧಿಕಾರಿಗಳ ಒಂದು ದೊಡ್ಡ ಸಭೆಯನ್ನು ಮಾಡಿದ್ದೇನೆ. ಸರಿಯಾದ ಸೂಕ್ತವಾದ ನಿರ್ದೇಶನವನ್ನು ಕೊಟ್ಟಿದ್ದೇನೆ. ವಿದ್ಯುಚ್ಛಕ್ತಿ ಕಳ್ಳತನವಾಗತಕ್ಕ ಬಗ್ಗೆ ತಾವೇನು ಪ್ರಸ್ತಾಪ ಮಾಡುತ್ತಿದ್ದೀರಿ ಅದರ ಬಗ್ಗೆ ಅನೇಕ ಕಡೆಯಿಂದ ದೂರು ಇವೆ. ಇತ್ತೀಚೆಗೆ ನನ್ನ ಗಮನಕ್ಕೆ ಬಂದಿರುವ ಹಾಗೆ, ನಮ್ಮ ಅಧಿಕಾರಿಗಳು ನಿಷ್ಕ್ರಿಯತೆ, ಎಲ್ಲರೂ ಹಾಗೆ ಎಂದು ಹೇಳುವುದಿಲ್ಲ. ಕೆಲವು ಕಡೆಗಳಲ್ಲಿ ಆರಾಮವಾಗಿ ಕುಳಿತುಕೊಳ್ಳುವುದರಿಂದ ಶಾಮೀಲಾಗಿದ್ದಾರೆನ್ನುವ ಭಾವನೆ ಬರುವ ರೂಪದಲ್ಲಿ ವಿಚಾರ ನಡೆದಿದೆ ಎಂಬ ಬಗ್ಗೆ ದೂರುಗಳು ಸರ್ಕಾರಕ್ಕೆ ಬಂದಿದೆ. ಅದೆಲ್ಲವನ್ನು ವಿಚಾರಮಾಡಿ ಆಮೂಲಾಗ್ರವಾಗಿ ತನಿಖೆ ಮಾಡಬೇಕು, ಸರ್ಕಾರಕ್ಕೆ ವಿದ್ಯುಚ್ಛಕ್ತಿ ಮಂಡಳಿಯಿಂದ ವರದಿ ಬರಬೇಕು ಸತ್ಯಾಂಶವನ್ನು ತಿಳಿದು ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಕ್ತ ಆದೇಶವನ್ನು ಕೊಟ್ಟಿದ್ದೇನೆ.

ಶ್ರೀ ಕೆ. ಹರ್ಷಕುಮಾರ ಗೌಡ: ಬೆಂಗಳೂರಿಗೂ ಮೈಸೂರಿಗೂ ನೀತಿ ಏತಕ್ಕೆ ಬದಲಾವಣೆಯಾಗಿದೆ ಎಂಬ ನನ್ನ ಸಂಶಯ ನಿವಾರಣೆಯಾಗಬೇಕು. ನನ್ನ ಮೊದಲನೆಯ ಪ್ರಶ್ನೆಗೆ ಬೆಂಗಳೂರು ನಗರದಲ್ಲಿ ಲೋಡ್‌ಶೆಡ್ಡಿಂಗ್ ಮಾಡುತ್ತಿಲ್ಲವೆಂದು ಹೇಳಿದ್ದೀರಿ. ಬೆಂಗಳೂರು ನಗರದಲ್ಲಿ ಏತಕ್ಕೆ ಮಾಡುತ್ತಿಲ್ಲ? ಮೈಸೂರು ನಗರದಲ್ಲಿ ಮಾತ್ರ ಏತಕ್ಕೆ ಇದನ್ನು ಅಪ್ಲೈ ಮಾಡಿದ್ದೀರಿ? ಈ ನನ್ನ ಸಂಶಯವನ್ನು ನಿವಾರಣೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ: ಬೆಂಗಳೂರು ನಗರದ ಸಹ ಕೆಲವು ಸಾರಿ ಲೋಡ್‌ಶೆಡ್ಡಿಂಗ್ ಮಾಡುತ್ತೇವೆ. ಅದೇ ರೀತಿ ಮೈಸೂರಿನಲ್ಲಿಯೂ ಮಾಡುತ್ತೇವೆ. ಆದರೆ ಟೈಮಿಂಗ್ಸ್ ಮಾತ್ರ ಚೇಂಜ್ ಇರುತ್ತದೆ. ಲೋಡ್‌ಶೆಡ್ಡಿಂಗ್ ಮಾಡುವುದಿಲ್ಲ ಎನ್ನುವ ಪ್ರಶ್ನೆ ಬರುವುದಿಲ್ಲ. ಕರ್ನಾಟಕ ರಾಜ್ಯದ ಎಲ್ಲಾ ಕಡೆ ಲೋಡ್‌ಶೆಡ್ಡಿಂಗ್ ಮಾಡುವುದು ಅನಿವಾರ್ಯವಾಗಿದೆ. ವಿದ್ಯುಚ್ಛಕ್ತಿ ಕಡಿಮೆ ಮತ್ತು ವಿದ್ಯುತ್‌ನ ಅಭಾವವಿರುವುದರಿಂದ ಎಲ್ಲ ಕಡೆ ಮಾಡಬೇಕಾಗಿದೆ. ಮೈಸೂರಿನಲ್ಲಿ ಏನಾಗಿದೆ ಅಂದರೆ, ತಾಂತ್ರಿಕದೋಷಗಳಿವೆ ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ಲೋಡ್‌ಶೆಡ್ಡಿಂಗ್ ಮಾಡುವುದು ಅನಿವಾರ್ಯವಾಗಿದೆ. ಇದನ್ನೆಲ್ಲ ನೋಡಿ ಸೂಕ್ತಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಅಧಿಕಾರಿಗಳಿಗೆ ತಿಳಿಸಿದ್ದೇನೆ.

ಕೋಲಾರದಿಂದ ಮುಳಬಾಗಿಲಿಗೆ 66 ಕೆ.ವಿ. ಲೈನ್ ಹಾಕುವುದು

14 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರದಿಂದ ಮುಳಬಾಗಿಲವರೆಗೆ 66 ಕೆ.ವಿ. ಲೈನ್ ಹಾಕಲು ಪ್ರಾರಂಭ ಮಾಡಿದ್ದು ಯಾವ ತಾರೀಖು?

ಆ) ಈ ಮೇಲ್ಕಂಡ ಲೈನು ಹಾಕುವ ಕಾರ್ಯ ಮುಗಿಯಲು ಇನ್ನೂ ಎಷ್ಟು ಸಮಯ ಬೇಕಾಗಬಹುದು;

ಇ) ಹಿಂದಿನ ವಿದ್ಯುಚ್ಛಕ್ತಿ ಸಚಿವರು ಮುಳಬಾಗಿಲಿಗೆ ಬಂದಿದ್ದಾಗ, 1990 ನವೆಂಬರ್ ತಿಂಗಳ ಕೊನೆಯೊಳಗೆ ಮುಗಿಸುತ್ತೇನೆಂದು ಸಮಾರಂಭವೊಂದರಲ್ಲಿ ಹೇಳಿಕೆ ಕೊಟ್ಟಿದ್ದು ನಿಜವೇ?

ಈ) ಈ ಲೈನನ್ನು ಸಕಾಲದಲ್ಲಿ ಮುಗಿಸಲು ತಕ್ಕ ಕಾರ್ಯಕ್ರಮ ಕೈಗೊಳ್ಳದಿರುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಜನವರಿ 1989ರಲ್ಲಿ ಪ್ರಾರಂಭ ಮಾಡಲಾಯಿತು.

ಆ) ಮಾರ್ಚ್ 1991ರ ವೇಳಿಗ ಪೂರ್ಣಗೊಳಿಸಲು ಯೋಚಿಸಿದೆ.